ಮಕ್ಕಳು, ಹೆಂಗಸರ ನಿಡುಸುಯ್ಲು ತಣಿಯದನಕ
ಮಣಿಮೇಕಲೆಯನ್ನು ಕರೆದೊಯ್ಯುವನಕ
ನಾವು ವಿರಮಿಸುವುದಿಲ್ಲ ಅಡಿಗಳೆ

ಅವನ ಮಾತುಗಳೊಂದಿಗೆ ಗುಂಪಿನಲ್ಲಿದ್ದ ಹಲವರ ಮಾತುಗಳೂ ಇದರೊಡನೆ ಸೇರಿಕೊಂಡವು.

'ಅಯ್ಯಾ, ಮಣಿಮೇಕಲೆ ಇದೇ ವಿಹಾರದಲ್ಲಿ ಇದ್ದಾಳೆ ಎಂದು ನಿಮಗೆ ತಿಳಿಸಿದವರು ಯಾರು' ಎಂದು ಮಾಧವಿ ಕೇಳಿದಳು. ಅವಳ ಮಾತುಗಳಲ್ಲಿ ಕುತೂಹಲವಿತ್ತು.

ಗುಂಪಿನಲ್ಲಿದ್ದ ಒಬ್ಬ ಹೆಂಗಸು, 'ಅಮ್ಮಾ ನಾವು ಮಧುರೆಗೆ ಹೋಗಿ, ಅಲ್ಲಿ ಶಾತ್ತನಾರ್ ಅವರನ್ನು ಕಂಡೆವು. ಅವರೇ ನಮಗೆ ಮಣಿಮೇಕಲೆ ಇರುವ ಈ ವಿಹಾರದ ಬಗ್ಗೆ ತಿಳಿಸಿದರು. ಅವರು ತಿಳಿಸಿದಂತೆ ನಾವಿಲ್ಲಿಗೆ ಬಂದಿದ್ದೇವೆ. ನಾವು ಮಣಿಮೇಕಲೆಯನ್ನು ನೋಡಬೇಕು' ಎಂದು ಅಂಗಲಾಚುವ ದನಿಯಲ್ಲಿ ಕೇಳಿಕೊಂಡಳು.

ಶಾತ್ತನಾರ್ ಅವರ ಹೆಸರನ್ನು ಕೇಳಿದ ಕೂಡಲೇ ಮಾಧವಿ, ಸುಧಾಮತಿ ಇಬ್ಬರೂ ಸಂತೋಷದಿಂದ 'ನಮ್ಮ ಕವಿ ಶಾತ್ತನಾರ್ ಅವರ ನಾಡಿನಿಂದ ಬಂದವರೇ ನೀವು! ನಿಮ್ಮನ್ನು ನೋಡಿದ ಮೇಲೆ ಆ ಮಹಾಮಹಿಮರನ್ನೇ ನೋಡಿದ ಹಾಗಾಯಿತು. ಹೇಗಿದ್ದಾರೆ ನಮ್ಮ ಪೂಜ್ಯ ಕವಿಗಳು! ಅವರಿಗೆ ಇಲ್ಲಿಂದಲೇ ನಮಿಸುತ್ತೇವೆ. ಅವರು ನೂರುಕಾಲ ಬಾಳಲಿ' ಎಂದು ಮಧುರೆ ನಗರದತ್ತ ಮುಖ ಮಾಡಿ ವಂದಿಸಿದರು.

ಅಷ್ಟುಹೊತ್ತಿಗೆ ಧ್ಯಾನಮಂದಿರದಿಂದ ಹೊರಬಂದ ಮಣಿಮೇಕಲೆ ಅಲ್ಲಿ ಕುಳಿತಿದ್ದ ಕಾಂಚೀಪುರದ ಅತಿಥಿಗಳು, ಅರವಣ ಗುರುಗಳು, ಮಾಧವಿ ಮತ್ತು ಸುಧಾಮತಿ ಇದ್ದೆಡೆಗೆ ಬಂದು 'ಬಂಧುಗಳೇ ತಾವೆಲ್ಲಾ ಯಾರು? ಎಲ್ಲಿಂದ ಬಂದಿರಿ?' ಎಂದು ಬಂದಿದ್ದ ಅತಿಥಿಗಳನ್ನು ಕೇಳಿದಳು. ಸುಧಾಮತಿಯೇ ಮುಂದಾಗಿ ಅಲ್ಲಿ ನೆರೆದಿದ್ದ ಅತಿಥಿಗಳ ಬಗ್ಗೆ ಮಣಿಮೇಕಲೆಗೆ ತಿಳಿಸಿದಳು.

'ಮಣಿಮೇಕಲೆ, ಮಧುರೆಯಿಂದ ಕವಿ ಶಾತ್ತನಾರ್ ಅವರೇ ಕಾಂಚೀಪುರದ ಈ ಅತಿಥಿಗಳನ್ನು ಇಲ್ಲಿಗೆ ಕಳುಹಿಸಿದ್ದಾರೆ. ನೀನು ಈ ಕೂಡಲೇ ಕಾಂಚೀಪುರಕ್ಕೆ ತೆರಳು. ಅಲ್ಲಿ ಜನ ಬರದ ಬೇಗೆಯಿಂದ ನರಳುತ್ತಿದ್ದಾರೆ. ಅವರಿಗೆಲ್ಲಾ ಅನ್ನ ನೀಡಿ ಅವರನ್ನು ರಕ್ಷಿಸು. ಈ ಜನರೇ ನಿನ್ನನ್ನು ಕರೆದುಕೊಂಡು ಕಾಂಚೀಪುರಕ್ಕೆ ಕರೆದುಕೊಂಡು ಹೋಗುತ್ತಾರೆ. ಆದಷ್ಟೂ ಬೇಗನೆ ಹೋಗು. ತಡಮಾಡಿದರೆ ಹೆಚ್ಚಿನ ಅನಾಹುತವೇ ಆಗುತ್ತದೆ' ಎಂದು ಮಾಧವಿ ಹೇಳಿದಳು. ಅವಳ ಮಾತುಗಳಲ್ಲಿ ನೊಂದಿರುವವರ ಬಗ್ಗೆ ಅನುಕಂಪವೂ ಮತ್ತು ಕಳಕಳಿಯೂ ವ್ಯಕ್ತವಾಗುತ್ತಿತ್ತು.

ಶಾತ್ತನಾರ್ ಅವರ ಹೆಸರನ್ನು ಕೇಳಿದ ಕೂಡಲೇ ಮಣಿಮೇಕಲೆಯೂ ಮಧುರೆ ನಗರದತ್ತ ಮುಖಮಾಡಿ ನೆಲಕ್ಕೆ ವಂದಿಸಿದಳು. 'ಮಣಿಮೇಕಲೆ, ಈಗಲೇ ಹೊರಡು. ಇನ್ನು ತಡಮಾಡಬೇಡ. ಅನ್ನವಿಲ್ಲದವರಿಗೆ ಅನ್ನ ನೀಡಿ ಅವರ ಹಸಿವನ್ನು ಇಂಗಿಸು. ಲೋಕಹಿತವೇ ನಿನ್ನ ಹಿತ. ಸಕಲ ಜೀವಿಗಳ ಹಿತಕ್ಕಾಗಿ ನೀನೀಗ ಕಾಂಚೀಪುರಕ್ಕೆ ಹೊರಡು. ಬೋಧಿಸತ್ವರು ಲೋಕಕ್ಕೆ ಹಿತವನ್ನುಂಟುಮಾಡಲಿ. ಹೋಗಿಬಾ' ಎಂದು ಅರವಣ ಅಡಿಗಳು ಹೇಳಿದರು.

ಗುರುಗಳ ಮಾತುಗಳನ್ನು ಕೇಳಿದ ಮಣಿಮೇಕಲೆ, ಬಡಜನರ, ದೀನ ದರಿದ್ರರ ಹಸಿವನ್ನು ಇಂಗಿಸಲು ಹೊರಟಳು. ಅವಳ ಒಂದು ಕೈಯಲ್ಲಿ ಅಮೃತಸುರಭಿ ಅಕ್ಷಯ ಪಾತ್ರೆ, ಮತ್ತೊಂದು ಕೈಯಲ್ಲಿ ಕಂದೀಲು, ಇವರ ಹಿಂದೆ ಕಾಂಚೀಪುರದ ಗುಂಪು, ಮುಂಗಾರು ಮಳೆ ಮೋಡಗಳಂತೆ ಕಾಂಚೀಪುರದತ್ತ ನಡೆದರು.

* * *

ಕಾಂಚೀಪುರವನ್ನು ತಲುಪುತ್ತಿದ್ದ ಹಾಗೆ, ಅಲ್ಲಿನ ಒಂದೊಂದು ದೃಶ್ಯಗಳೂ ಮೃತ್ಯುವಿನ ಮುಖದಂತೆ ಗೋಚರಿಸತೊಡಗಿತು. ಹಬೆಯಾಡುತ್ತಿದ್ದ ಕೆಂದೂಳಿನ ಹಾದಿ, ಎಲೆಯುದುರಿ ರಣಬಿಸಿಲಿಗೆ ಜೀವತೆತ್ತ ಮರಗಳು, ಮಣ್ಣಿನೊಳಗೇ ಉಸಿರುಗಟ್ಟಿ ಪ್ರಾಣತೆತ್ತ ಬೀಜಗಳು, ಗೂಡಿನೊಳಗೇ ಅಸುನೀಗಿದ ಹೂಮರಿಗಳು, ಬತ್ತಿದ ಕಾಲುವೆಗಳು, ಗುರುತು ಸಿಗದಂತೆ ಬಟಾಬಯಲಾದ ಬೆಜ್ಜಲು ಹೊಲಗಳು ಎಲ್ಲವೂ ಕಣ್ಣಿಗೆ ರಾಚುತ್ತಿದ್ದವು. ನೀರಿಗಾಗಿ ಹಂಬಲಿಸುತ್ತಾ ಅಲ್ಲಲ್ಲಿ ಸತ್ತುಬಿದ್ದ ದನಕರುಗಳು, ಕಾಂಚೀಪುರ ಹಸಿವು ಮತ್ತು ನೀರವತೆಯಲ್ಲಿ ಮುಳುಗಿತ್ತು. ಒಣಗಾಳಿಯ ಹೊರತು ಮತ್ತೇನೂ ಅಲ್ಲಿ ಕಾಣುತ್ತಿರಲಿಲ್ಲ. ಬರದ ದೂಳಿನಲ್ಲೇ ಮುಳುಗಿದ್ದ